# A

# CCE RR
## UNREVISED
## FULL SYLLABUS

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2023

**S.S.L.C. EXAMINATION, JUNE, 2023**

## ಮಾದರಿ ಉತ್ತರಗಳು
## MODEL ANSWERS

ದಿನಾಂಕ : 16. 06. 2023 ] ಸಂಕೇತ ಸಂಖ್ಯೆ : **62-K**

Date : 16. 06. 2023 ] CODE NO. : **62-K**

# ವಿಷಯ : ತೃತೀಯ ಭಾಷೆ — ಕನ್ನಡ
# Subject : Third Language — KANNADA

(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)

[ ಗರಿಷ್ಠ ಅಂಕಗಳು : 80

[ Max. Marks : 80

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **8 × 1 = 8** |
| 1. | 'ಪರಿಚಿತ' – ಪದದ ವಿರುದ್ಧಾರ್ಥಕ ರೂಪ<br>(ಎ) ಅಪರಿಮಿತ (ಬಿ) ಅಪ್ರಮಾಣ<br>(ಸಿ) ಅಪರಿಚಿತ (ಡಿ) ಪ್ರಸಿದ್ಧ<br>***ಉತ್ತರ :*** (ಸಿ) ಅಪರಿಚಿತ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಕೆಳಗಿನವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆ<br>(ಎ) ರಕ್ತಗಾಲಿನ (ಬಿ) ಗುಂಡಿಲ್ಲದ<br>(ಸಿ) ನವೋದಯ (ಡಿ) ಕುಲವೆನ್ನದ<br>**ಉತ್ತರ :** (ಎ) ರಕ್ತಗಾಲಿನ | |
| 3. | ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ಮತ್ತು ಖಚಿತ ಅರ್ಥ ಕೊಡುವ ವಾಕ್ಯಗಳನ್ನು ಈ ರೀತಿ ಕರೆಯುವರು<br>(ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತ ವಾಕ್ಯ<br>(ಸಿ) ಮಿಶ್ರವಾಕ್ಯ (ಡಿ) ಅಲಂಕಾರಿಕ ವಾಕ್ಯ<br>**ಉತ್ತರ :** (ಎ) ಸಾಮಾನ್ಯವಾಕ್ಯ | |
| 4. | 'ದೃಷ್ಟಿ' – ಈ ಪದದ ತದ್ಭವ ರೂಪ<br>(ಎ) ದರ್ಶನ (ಬಿ) ದಿವ್ಯ<br>(ಸಿ) ದಿಬ್ಬ (ಡಿ) ದಿಟ್ಟಿ<br>**ಉತ್ತರ :** (ಡಿ) ದಿಟ್ಟಿ | |
| 5. | ಇವುಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರದಿಂದ ಕೂಡಿರುವ ಪದ<br>(ಎ) ಅಮ್ಮ (ಬಿ) ರಾತ್ರಿ<br>(ಸಿ) ಹಬ್ಬ (ಡಿ) ಅಜ್ಜ<br>**ಉತ್ತರ :** (ಬಿ) ರಾತ್ರಿ | |
| 6. | 'ಮರದಲ್ಲಿ' – ಪದವು ಈ ವಿಭಕ್ತಿಗೆ ಉದಾಹರಣೆಯಾಗಿದೆ<br>(ಎ) ಸಪ್ತಮೀ (ಬಿ) ದ್ವಿತೀಯಾ<br>(ಸಿ) ಪ್ರಥಮಾ (ಡಿ) ಚತುರ್ಥೀ<br>**ಉತ್ತರ :** (ಎ) ಸಪ್ತಮೀ | |
| 7. | 'ಹುಡುಗ' – ಪದದ ಬಹುವಚನ ರೂಪ<br>(ಎ) ಹುಡುಗರು (ಬಿ) ವಿದ್ಯಾರ್ಥಿಗಳು<br>(ಸಿ) ಪಾಲಕರು (ಡಿ) ಹುಡುಗಿಯರು<br>**ಉತ್ತರ :** (ಎ) ಹುಡುಗರು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 8. | ಪದಗಳಿಗೆ ಹೆಚ್ಚುವರಿ ವಿವರಣೆಗಳನ್ನು ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಈ ಲೇಖನ ಚಿಹ್ನೆಯನ್ನು ಬಳಸಲಾಗುತ್ತದೆ<br>(ಎ) ಉದ್ಧರಣ (ಬಿ) ಅಲ್ಪವಿರಾಮ<br>(ಸಿ) ಅರ್ಧವಿರಾಮ (ಡಿ) ಆವರಣ<br>***ಉತ್ತರ :*** (ಡಿ) ಆವರಣ | |
| **II.** | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **4 × 1 = 4** |
| 9. | ಜಾತಿ ಇಲ್ಲದ ಭೀತಿ ಇಲ್ಲದ : ಬಾಳ ಕಟ್ಟತೇವ :: ಗೋಳಿಲ್ಲದ ಗುಂಡಿಲ್ಲದ : ................ .<br>***ಉತ್ತರ :*** ನಾಡ ಕಟ್ಟತೇವ | |
| 10. | ಸತ್ಯವ ನುಡಿವುದೇ : ದೇವಲೋಕ :: ಮಿಥ್ಯವ ನುಡಿವುದೇ : ............ .<br>***ಉತ್ತರ :*** ಮರ್ತ್ಯಲೋಕ | |
| 11. | ಕಿತ್ತೂರು ರಾಣಿ : ಚೆನ್ನಮ್ಮ :: ಉಲ್ಲಾಳದ ರಾಣಿ : ........................ .<br>***ಉತ್ತರ :*** ಅಬ್ಬಕ್ಕದೇವಿ | |
| 12. | ಗುಂಡಪ್ಪನವರ ತಿಮ್ಮ : ಸೂರ್ಯ :: ಬೀಚಿಯವರ ತಿಂಮ : ........... .<br>***ಉತ್ತರ :*** ಬೆಡ್‌ಲ್ಯಾಂಪ್ | |
| **III.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | **4 × 1 = 4** |
| 13. | ಕನ್ನಡದ ದೀಕ್ಷೆಯನ್ನು ಬೀಚಿಯವರು ಸ್ವೀಕರಿಸಿದ ಶುಭಮುಹೂರ್ತ ಯಾವುದು ?<br>***ಉತ್ತರ :***<br>ಅ.ನ.ಕೃ.ರವರ 'ಸಂಧ್ಯಾರಾಗ' ಕೃತಿಯನ್ನು ಬೀಚಿಯವರು ಓದಿ ಮುಗಿಸಿದ್ದು ಕನ್ನಡದ ದೀಕ್ಷೆ ಸ್ವೀಕರಿಸಿದ ಶುಭಮಹೂರ್ತವಾಗಿದೆ. | |
| 14. | ಪುರಂದರದಾಸರು ಡಾಂಭಿಕ ಭಕ್ತನ ದೇವರ ಕೋಣೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ ?<br>***ಉತ್ತರ :***<br>ಪುರಂದರದಾಸರು ಡಾಂಭಿಕ ಭಕ್ತನ ದೇವರ ಕೋಣೆಯನ್ನು ಕಂಚುಗಾರನ ಬಿಡಾರಕ್ಕೆ ಹೋಲಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 15. | ಪುಲಿಗೆರೆ ಸೋಮನಾಥ ಹೇಳಿರುವಂತೆ ಮಗನಾದವನಲ್ಲಿ ಇರಬೇಕಾದ ಗುಣ ಯಾವುದು ?<br>***ಉತ್ತರ :***<br>ಪುಲಿಗೆರೆ ಸೋಮನಾಥ ಹೇಳಿರುವಂತೆ ಮಗನಾದವನಲ್ಲಿ 'ವಿನಯ' ಗುಣ ಇರಬೇಕು. | |
| 16. | ಧರ್ಮಪದನ ತಂದೆಯ ಹೆಸರೇನು ?<br>***ಉತ್ತರ :***<br>ಧರ್ಮಪದನ ತಂದೆಯ ಹೆಸರು ವಿಶು. | |
| **IV.** | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.**<br>**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) :** | **8 × 2 = 16** |
| 17. | ಮಿನಿಪೊಲೀಸ್ ನಗರದ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು ?<br>***ಉತ್ತರ :***<br>ಮಿನಿಪೊಲೀಸ್ ನಗರದಲ್ಲಿ ಗೊರೂರರು ತಮ್ಮ ಮಿತ್ರನ ವಿಳಾಸ ಮರೆತು ರಾತ್ರಿ ವೇಳೆಯಲ್ಲಿ ಅಲೆಯುತ್ತಿದ್ದರು. ಆಗ ಪೊಲೀಸಿನವನು "ಈಗ ನೀವು ನನ್ನ ವಶವಾದಿರಿ, ನಾನು ನಿಮ್ಮ ಕೈ ಬಿಡುವಂತಿಲ್ಲ." ಎಂದು ತನ್ನ ಕಾರಿನಲ್ಲಿ ಮನೆಗೆ ಕರೆದುಕೊಂಡು ಹೋದನು. ಅಲ್ಲಿ ಬ್ರೆಡ್, ಹಾಲು, ಹಣ್ಣು ಮತ್ತು ಬಿಸ್ಕತ್ತುಗಳನ್ನು ರಾತ್ರಿ ಊಟಕ್ಕೆ ಕೊಟ್ಟನು. ಊಟವಾದ ನಂತರ ಗಾಳಿ ಬೆಳಕು ಬರುವ ಲಾಕಪ್ಪಿನಲ್ಲಿ ಸ್ವಚ್ಛವಾದ ಹಾಸಿಗೆ ಕೊಟ್ಟು ಮಲಗಲು ಹೇಳಿದನು. | |
| 18. | ಗಾಂಧೀಜಿಯವರು ಗೌರಮ್ಮನವರ ಮನೆಗೆ ಏಕೆ ಬಂದರು ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ಸ್ವಾತಂತ್ರ್ಯ ಚಳವಳಿಯಲ್ಲಿ ತೀವ್ರವಾದ ಆಸಕ್ತಿಯನ್ನು ಹೊಂದಿದ್ದ ಕೊಡಗಿನ ಗೌರಮ್ಮನವರು ಖಾದಿ ಬಟ್ಟೆಗಳನ್ನು ಧರಿಸುತ್ತಿದ್ದರು. ಮಹಾತ್ಮಾ ಗಾಂಧೀಜಿಯವರ ಪರಮ ಅನುಯಾಯಿ ಆಗಿದ್ದ ಇವರು ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿ, ಗಾಂಧೀಜಿಯವರು ತಮ್ಮಂತಹ ಸಾಧಾರಣ ಕುಟುಂಬದವರ ಮನೆಗೂ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬರಬೇಕೆಂದು ಹಠ ಹಿಡಿದರು. ಕೊನೆಯಲ್ಲಿ ಗಾಂಧೀಜಿಯವರು ಇವರ ಹಠಕ್ಕೆ ಮೆಚ್ಚಿ ಕರ್ನಾಟಕ ಪ್ರವಾಸ ಕೈಗೊಂಡಾಗ ಇವರ ಮನೆಗೆ ಬಂದರು. ಗಾಂಧೀಜಿ ಕೊಡಗಿನ ಕಿತ್ತಳೆ ಹಣ್ಣನ್ನು ನೀಡಿ ಇವರ ಉಪವಾಸ ಅಂತ್ಯಗೊಳಿಸಿದರು. | |
| 19. | ಮೋಹನಪುರದ ಸತ್ಯಾಗ್ರಹಿಗಳು ಮಾಡುತ್ತಿದ್ದ ಘೋಷಣೆಗಳಾವವು ?<br>***ಉತ್ತರ :***<br>ಮೋಹನಪುರದ ಸತ್ಯಾಗ್ರಹಿಗಳು 'ಬೋಲೋ ಭಾರತ ಮಾತಾಕೀ ಜೈ', 'ವಂದೇ ಮಾತರಂ' ಎಂಬ ಘೋಷಣೆಗಳನ್ನು ಮಾಡುತ್ತಿದ್ದರು. ಇವುಗಳಲ್ಲದೆ ಗಾಂಧೀಜಿಯವರ 'ಮಾಡು ಇಲ್ಲವೆ ಮಡಿ', 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿರಿ' ಎಂಬ ಘೋಷಣೆಗಳೊಂದಿಗೆ ಸಾಗುತ್ತಿದ್ದರು. | |
| 20. | ಈಗಿನ ವಿದ್ಯಾರ್ಥಿಗಳು ಪುಣ್ಯವಂತರು ಎಂದು ಬೀಚಿಯವರು ಹೇಳಲು ಕಾರಣವೇನು ?<br>***ಉತ್ತರ :***<br>ಈಗಿನ ವಿದ್ಯಾರ್ಥಿಗಳು ಪುಣ್ಯವಂತರು ಅವರಿಗೆ ನರ್ಸರಿ ಕ್ಲಾಸಿನಲ್ಲಿಯ ಪುಸ್ತಕಕ್ಕೇ ನೋಟ್ಸ್‌ಗಳಾಗಿವೆ. ಆ ನೋಟ್ಸ್‌ಗಳಿಗೆ ಡೈಜೆಸ್ಟ್ ಇವೆ. ಆದರೆ ನಮಗೆ ಮಾತ್ರ ಪಠ್ಯಪುಸ್ತಕಗಳು ಗತಿ ಎನ್ನುವ ಕಾಲವದು ಪಠ್ಯಪುಸ್ತಕಗಳಲ್ಲದೆ ಬೇರೆತರ ಓದುವುದು ಪಾಲಕರ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧ, ಮಾಸ್ತರರ ದೃಷ್ಟಿಯಲ್ಲಿ ಸಮಯ ಹಾಳು. | |
| 21. | ಗ್ರಂಥಾಲಯವನ್ನು ಹೊಕ್ಕಾಗ ಕವಿಗೆ ಆದ ಅನುಭವಗಳನ್ನು ನಿಮ್ಮ ಮಾತುಗಳಲ್ಲಿ ಅಭಿವ್ಯಕ್ತಪಡಿಸಿರಿ.<br>***ಉತ್ತರ :***<br>ಕವಿ ಗ್ರಂಥಾಲಯವನ್ನು ಹೊಕ್ಕಾಗ ಕಣ್ಣು ಹರಿದಷ್ಟು ದೂರ ಗ್ರಂಥಗಳ ಸಾಲುಗಳನ್ನು ನೋಡುತ್ತಾರೆ. ಇವುಗಳಡಿನ ಧೂಳಿನ ಕಣ ಪುಸ್ತಕಾಲಯದಲ್ಲಿ ಕ್ಷಣಕಾಲ ನಿಂತಾಗ, ಅವರ ಮತಿ ಮುದುಡಿ ಹೋಗಿ, ಅಹಂಕಾರ ನುಚ್ಚು ನೂರಾಗಿ ಅಲ್ಪತೆಯ ಅರಿವಾಗುತ್ತದೆ. ಗ್ರಂಥಗಳಲ್ಲಿನ ಜ್ಞಾನರಾಶಿಗೆ ಬೆದರಿ ಕವಿ ಬೇಗನೆ ಹೊರಗೆ ಓಡಲು ತವಕಿಸುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ಸಿ.ಪಿ.ಕೆ.ಯವರು ಗ್ರಂಥಗಳನ್ನು 'ಹಿರಿಬಾಳುಗಳ ಪಳೆಯುಳಿಕೆ' ಎಂದು ಕರೆಯಲು ಕಾರಣವೇನು ?<br>***ಉತ್ತರ :***<br>ಸಿ.ಪಿ.ಕೆ.ಯವರು ಗ್ರಂಥಗಳನ್ನು 'ಹಿರಿಬಾಳುಗಳ ಪಳೆಯುಳಿಕೆ' ಎಂದು ಕರೆದಿದ್ದಾರೆ.<br>ಜೀವನದಲ್ಲಿ ಸಾಧನೆಗೈದ ಅನೇಕ ಹಿರಿಯ ಜೀವಗಳು ಇಂದು ನಮ್ಮೊಂದಿಗಿಲ್ಲ. ಆದರೆ ಗ್ರಂಥಗಳಿಂದ ಅವರ ಜೀವನ ಮತ್ತು ಸಾಧನೆ ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ ಎನ್ನುವ ಕಾರಣಕ್ಕೆ ಗ್ರಂಥಗಳನ್ನು ಹಿರಿಬಾಳುಗಳ ಪಳೆಯುಳಿಕೆ ಎಂದು ಕರೆದಿದ್ದಾರೆ. | |
| 23. | ಮೋಡಗಳು ಕಾಣಿಸಿಕೊಂಡಾಗ ರೈತನಿಗಾದ ಸಂತೋಷವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ರೈತನು ಮೂಡಣದ ಮೋಡಗಳನ್ನು ನೋಡಿದಾಗ ಅವುಗಳನ್ನು ಗೋಡೆಯ ಕಪ್ಪುಬಣ್ಣಕ್ಕೆ ಹೋಲಿಸುತ್ತಾನೆ. ಮೋಡದ ಚೆಂದವನ್ನು ನೋಡಿ, ಆಕಾಶದಲ್ಲಿ ಮಳೆ ಬರುತ್ತಿರುವ ಶಬ್ದ ಕೇಳಬರುತ್ತಿದೆ ಎಂದು ಸಂತೋಷದಿಂದ ಕುಣಿಯುತ್ತಾನೆ. ಈ ರೀತಿ ರೈತನು ಮಳೆಯನ್ನು ಕಂಡು ಸಂತೋಷ ವ್ಯಕ್ತಪಡಿಸುತ್ತಾನೆ. | |
| 24. | ಈರಪ್ಪ ಎಂ. ಕಂಬಳಿಯವರ ಬಿಳಿಯ ಶರ್ಟು ಕೆಂಪು ಬಣ್ಣಕ್ಕೆ ತಿರುಗಿದ್ದೇಕೆ ?<br>***ಉತ್ತರ :***<br>ಈರಪ್ಪ ಎಂ. ಕಂಬಳಿಯವರು ಪ್ರಯಾಣಿಸುತ್ತಿರುವ ಬಸ್ಸು ರಸ್ತೆಯಲ್ಲಿರುವ ರಸ್ತೆಗುಂಡಿಗಳು ಮತ್ತು ಅವುಗಳಲ್ಲಿ ತುಂಬಿರುವ ಕೆಸರಿನ ಪರಿವೆಯಿಲ್ಲದೆ ತನ್ನ ಪಾಡಿಗೆ ತಾನು ಓಡುತ್ತಲೇ ಇತ್ತು. ಬಸ್ಸು ನಿಂತಾಗ ಅದರ ಹಿಂದೆ ಎದ್ದ ಧೂಳು-ದುಮ್ಮು ಮೈಮೇಲೆಲ್ಲ ಇಳಿದು, ಹಾಕಿದ್ದ ಬಿಳಿಯ ಶರ್ಟು ಕೆಂಪು ಬಣ್ಣಕ್ಕೆ ತಿರುಗುತ್ತಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| V. | **ಸಂದರ್ಭಸಹಿತ ವಿವರಣೆ :** | **2 × 3 = 6** |
| | ಪದ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು-ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | "ತಾಯಿ ಎಂದು ಕರೆದ ಕನ್ನಡದ ಕಂದ ಯಾರು ?"<br>***ಉತ್ತರ :***<br>ಈ ಮಾತನ್ನು ವಿಜಯಲಕ್ಷ್ಮಿ ಈಶ್ವರಪ್ಪ ಬಾಳೇಕುಂದ್ರಿಯವರ 'ಜೀವನಧಾರೆ' ಎಂಬ ಕೃತಿಯಿಂದ ಆಯ್ದ 'ಕರ್ನಾಟಕದ ವೀರ ವನಿತೆಯರು' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಹಿತಶತ್ರುಗಳು ಪಿತೂರಿ ನಡೆಸಿ ರಾಣಿ ಚೆನ್ನಮ್ಮಳ ತೋಪು ಹಾರದಂತೆ ಮಾಡುತ್ತಾರೆ. ಕೊನೆಗೆ ಚೆನ್ನಮ್ಮಳು ಬ್ರಿಟಿಷರಿಗೆ ಸೆರೆ ಸಿಕ್ಕು. ಸೆರೆಮನೆಯಲ್ಲಿ ಸ್ವಾತಂತ್ರ್ಯದ ಕನಸು ಕಾಣುತ್ತಿರುತ್ತಾಳೆ. ಆಗ ಸೆರೆಮನೆಯಲ್ಲಿ ರಾಣಿ ಚೆನ್ನಮ್ಮಳನ್ನು ಸಂಧಿಸಲು ಬಂದ ಸಂಗೊಳ್ಳಿ ರಾಯಣ್ಣ "ತಾಯಿ" ಎಂದು ಕರೆದಾಗ ಈ ಮೇಲಿನಂತೆ ಕೆಚ್ಚಿನ ರಾಣಿ ಕಿತ್ತೂರು ಚೆನ್ನಮ್ಮ ಸಂಗೊಳ್ಳಿ ರಾಯಣ್ಣನಿಗೆ ಕೇಳಿದಳು.<br>ಸಂಗೊಳ್ಳಿ ರಾಯಣ್ಣನು ರಾಣಿ ಚೆನ್ನಮ್ಮಳಲ್ಲಿ ತಾಯಿಯನ್ನು ಕಂಡುದು ಹಾಗೂ ರಾಣಿ ಚೆನ್ನಮ್ಮಳು ರಾಯಣ್ಣನಲ್ಲಿ ಕನ್ನಡದ ಕಂದನನ್ನು ಕಂಡಿರುವುದು ತುಂಬಾ ಚೆನ್ನಾಗಿ ಮೂಡಿಬಂದಿದೆ. ತಾಯಿ-ಪುತ್ರನ ಪ್ರೀತಿಯ ಪ್ರತೀಕವಾದ ಈ ಪ್ರಸಂಗ ಸ್ವಾರಸ್ಯಕರವಾಗಿದೆ. | |
| 26. | "ಒಡೆದ ಮನಸುಗಳ ಕಂಡ ಕನಸುಗಳ ಕಟ್ಟೇ ಕಟ್ಟುತೇವ."<br>***ಉತ್ತರ :***<br>ಈ ವಾಕ್ಯವನ್ನು 'ಸತೀಶ ಕುಲಕರ್ಣಿ'ಯವರ 'ಕಟ್ಟುತೇವ ನಾವು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ನಮ್ಮ ನಾಡು ವಿಶಾಲವಾಗಿದೆ. ಇಲ್ಲಿ ಅನೇಕ ಧರ್ಮದ ಜನರು ವಾಸಿಸುತ್ತಿದ್ದಾರೆ. ಜಾತಿ, ಕುಲ, ಧರ್ಮ, ಭಾಷೆ ಮತ್ತು ಪ್ರಾಂತ್ಯಗಳ ನಡುವಿನ ತಾರತಮ್ಯ ಭಾವನೆಯಿಂದ ನಾಡಿನ ಜನರ ಮನಸುಗಳು ಮತ್ತು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕನಸುಗಳು ಒಡೆದು ಹೋಗಿವೆ. ಆದ್ದರಿಂದ ಕವಿ ಒಡೆದ ಮನಸುಗಳನ್ನು ಮತ್ತು ಕಂಡ ಕನಸುಗಳನ್ನು ಕಟ್ಟಲು ಕರೆ ಕೊಟ್ಟಿದ್ದಾರೆ.<br>ನಮ್ಮ ಸುಂದರ ನಾಡಿನ ಕನಸು ಸಾಕಾರಗೊಳ್ಳಲು ಒಡೆದ ಮನಸುಗಳನ್ನು ಮತ್ತು ಕಂಡ ಕನಸುಗಳನ್ನು ಕಟ್ಟುವಿಕೆ ಅನಿವಾರ್ಯ ಎಂಬ ಕರೆ ತುಂಬಾ ಸ್ವಾರಸಕರವಾಗಿದೆ. | |
| **VI.** | **ಐದು-ಆರು ವಾಕ್ಯಗಳಲ್ಲಿ ಉತ್ತರಿಸುವುದು :** | **4 × 3 = 12** |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 27. | ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಿಚಾರಗಳನ್ನು ಕುರಿತು ಬರೆಯಿರಿ.<br>***ಉತ್ತರ :***<br>ಮಂಜುನಾಥಯ್ಯನವರ ಮನೆಯಲ್ಲಿ ಆಗಾಗ್ಗೆ ಮೊಕ್ಕಾಂ ಹೂಡುತ್ತಿದ್ದ ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದ.ರಾ. ಬೇಂದ್ರೆ ಮುಂತಾದ ಹೆಸರಾಂತ ಲೇಖಕರ ಪರಿಚಯ ಗೌರಮ್ಮನವರಿಗಿತ್ತು. ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತೆ ಮತ್ತು ಲೇಖಕಿಯಾಗಿದ್ದ ಆರ್. ಕಲ್ಯಾಣಮ್ಮನವರೊಡನೆ ಇವರು ಸಂಪರ್ಕವನ್ನು ಇಟ್ಟುಕೊಂಡಿದ್ದರು.<br>ಯಕ್ಷಗಾನ, ತಾಳಮದ್ದಳೆ, ಕುಮಾರವ್ಯಾಸ, ಉಮರ್ ಖಯಾಮ್‌ನ ಕಾವ್ಯಗಳ ಬಗ್ಗೆ ಇವರು ಆಸಕ್ತಿಯನ್ನು ಬೆಳೆಸಿಕೊಂಡಿದ್ದರು. ಹೀಗಾಗಿ ಸಾಹಿತ್ಯ ಸಾಂಸ್ಕೃತಿಕ ವಲಯದ ಚರ್ಚೆ ಬದಲಾವಣೆಗಳು ಮತ್ತು ಹೊಸ ಬರೆವಣಿಗೆಯ ಸಂಪರ್ಕ ಈ ಲೇಖಕಿಯ ಬರವಣಿಗೆಗೆ ಪೂರಕವಾಗಿದ್ದವು. | |
| 28. | ರಾಮಸಿಂಗ್ ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗವನ್ನು ಹೇಗೆ ಪ್ರಶಂಸಿಸುತ್ತೀರಿ ? ವಿವರಿಸಿ.<br>***ಉತ್ತರ :***<br>ಒಂದು ವರ್ಷದ ಹಿಂದಷ್ಟೇ ಸ್ವಾತಂತ್ರ್ಯ ಹೋರಾಟದಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ತುಳಜಾಬಾಯಿಯು ತನ್ನ ಪತಿಯನ್ನು ಕಳೆದುಕೊಂಡಿದ್ದಳು. ಅದನ್ನು ಲೆಕ್ಕಿಸದೆ ತುಳಜಾಬಾಯಿಯು ಧೈರ್ಯ ತಂದುಕೊಂಡು ಮಗನಾದ ರಾಮಸಿಂಗ್‌ನನ್ನು ಆಶೀರ್ವದಿಸಿ ಮೋಹನಪುರದಲ್ಲಿನ ಹೋರಾಟಕ್ಕೆ ಶುಭಕೋರಿ ಕಳುಹಿಸಿಕೊಟ್ಟಳು. | |
| | ಇತ್ತ ರಾಮಸಿಂಗ್‌ನು ಸ್ವಯಂ ಸೇವಕರ ಸಭೆ ಸೇರಿಸಿ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂದು ಸಾರಲು ಆರಂಭಿಸಿದನು. ರಾಮಸಿಂಗ್‌ನು ತನ್ನ ಹಿಂಬಾಲಕರಿಗೆ 'ಮಾಡು ಇಲ್ಲವೆ ಮಡಿ' ಘೋಷಣೆ ಹೇಳಿಕೊಟ್ಟನು. ಕುಲಕರ್ಣಿಯು ರಾಮಸಿಂಗ್ ಮತ್ತು ಆತನ ಸ್ವಯಂ ಸೇವಕರು ಚದುರಿ ಹೋಗಲು ಗಾಳಿಯಲ್ಲಿ ಗುಂಡು ಹಾರಿಸುವನು. ಅದಕ್ಕೂ ಬಗ್ಗದ ರಾಮಸಿಂಗ್ 'ಬೋಲೋ ಭಾರತ ಮಾತಾಕೀ ಜೈ' ಎನ್ನುತ್ತಾ ಮುಂದೆ ಬಂದಾಗ ಕುಲಕರ್ಣಿ ಹಾರಿಸಿದ ಗುಂಡಿಗೆ ಬಲಿಯಾದನು. ಆಗ ಅಲ್ಲಿಗೆ ಬಂದ ತುಳಜಾಬಾಯಿಯು ರೋಧಿಸುತ್ತಾ 'ಹೊಟ್ಟೆಯಲ್ಲಿ ಹುಟ್ಟಿದ ಒಬ್ಬನೇ ಮಗನನ್ನು ಬಲಿಕೊಟ್ಟಿರುವೆ' ಎಂದು ಕುಲಕರ್ಣಿಗೆ ಹೇಳುತ್ತಾಳೆ. ನನ್ನ ಪ್ರಾಣವನ್ನು ತ್ಯಜಿಸಲು ನಾನು ಸಿದ್ಧಳಿದ್ದೇನೆ. ಈ ಧ್ವಜವನ್ನು ಮಾತ್ರ ಕೆಳಗಿಡಲಾರೆ, ಭಾರತಮಾತೆಗೆ ಜಯವಾಗಲಿ ಎಂದು ಕುಸಿಯುತ್ತಾಳೆ. | |
| 29. | ನುಡಿ ನಡೆಗಳು ಎಲ್ಲಕ್ಕಿಂತ ಮುಖ್ಯವಾದುದೆಂದು ಬಸವಣ್ಣನವರು ಹೇಗೆ ನಿರೂಪಿಸಿದ್ದಾರೆ ? ವಿವರಿಸಿ. | |
| | ***ಉತ್ತರ :*** | |
| | ಬಸವಣ್ಣನವರು ಹೇಳಿರುವ ಮಾನವೀಯ ಮೌಲ್ಯಗಳನ್ನು ನಮ್ಮ ನುಡಿನಡೆಗಳಲ್ಲಿ ಅಳವಡಿಸಿಕೊಂಡು ಆಚರಣೆಗೆ ತರಬೇಕು. ಅವುಗಳೆಂದರೆ ಕಳಬೇಡ, ಕೊಲಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ. ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಹುಸಿಯ ನುಡಿಯಲು ಬೇಡ ಎಂಬಂತವುಗಳೇ ಆಗಿವೆ. ಇವುಗಳ ಆಚರಣೆಯಿಂದ ನಮ್ಮ ಅಂತರಂಗ ಮತ್ತು ಬಹಿರಂಗಗಳು ಶುದ್ಧಿಯಾಗುತ್ತವೆ. | |
| | ಸತ್ಯವನ್ನು ನುಡಿದು ಆಚಾರವಂತನಾದರೆ ಅದುವೇ ಸ್ವರ್ಗಲೋಕವಾಗುತ್ತದೆ. ಮಿಥ್ಯವನ್ನು ನುಡಿದು ಅನಾಚಾರಿಯಾದರೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಅದುವೇ ನರಕಲೋಕವಾಗುತ್ತದೆ ಎಂದು ಬಸವಣ್ಣನವರು ಹೇಳಿದ್ದಾರೆ. ನಮ್ಮ ನುಡಿನಡೆಗಳು ಒಂದಾದರೆ ಕೂಡಲಸಂಗಮ ದೇವರು ಒಲಿದು ನಮ್ಮನ್ನು ಕಾಪಾಡುತ್ತಾನೆ ಎಂದು ಬಸವಣ್ಣನವರು ನುಡಿನಡೆಗಳ ಪ್ರಾಮುಖ್ಯತೆಯನ್ನು ಸಾರಿದ್ದಾರೆ. | |
| 30. | ಮಳೆದೇವರಲ್ಲಿ ರೈತನ ಪ್ರಾರ್ಥನೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. | |
| | ***ಉತ್ತರ :*** | |
| | ರೈತನಿಗೆ ಬೇಸಾಯವು ಪ್ರಧಾನ ವೃತ್ತಿ. ಆದ್ದರಿಂದ ಅವನ ಸುಖ ಸಂತೋಷಗಳು ಮಳೆಯನ್ನು ಅವಲಂಬಿಸಿವೆ. ಮಳೆ ಬಾರದಿದ್ದಾಗ ರೈತನು ಮಳೆದೇವರಲ್ಲಿ ಪ್ರಾರ್ಥಿಸುವ ರೀತಿ ಈ ಪದ್ಯದಲ್ಲಿ ಸುಂದರವಾಗಿ ವ್ಯಕ್ತವಾಗಿದೆ. | |
| | ಮಳೆಬಾರದೆ ಭೂಮಿ ಒಣಗಿದೆ. ನೀರು ಆಹಾರ ಇಲ್ಲದೆ ದನಕರುಗಳು ಸೊರಗಿವೆ. ಆದ್ದರಿಂದ ಮಳೆರಾಯ ನೀ ಬೇಗನೆ ಬಂದು ದನಕರುಗಳನ್ನು ಕಾಪಾಡು ಎಂದು ರೈತನು ಮೊರೆ ಇಡುತ್ತಾನೆ. ಭೂಮಿಯಲ್ಲಿ ಬೀಜ ಬಿತ್ತಿ ಬೆಳೆ ಬೆಳೆಯಲು ಮಳೆಯನ್ನು ಕರುಣಿಸು ಎಂದು ರೈತನು ನಿವೇದಿಸಿಕೊಳ್ಳುತ್ತಾನೆ. | |
| | ಮೂಡಣದಿಂದ ಬರುವ ಮುತ್ತಿನ ಸೋನೆಯ ಮಳೆಯು ಬೆಟ್ಟದ ಮೇಲೆ ಜಿಗ್ಗಿಸಿ ಹುಯ್ಯಬೇಕು. ಅಲ್ಲಿ ಭೈರವ ದೇವನಿದ್ದಾನೆ. ಸ್ವಾತಿಮಳೆ ಬಂದು ಸಾವಿರಾರು ಕೆರೆಗಳು ತುಂಬಿ, ಕುಣಿಗಲು ಕುಚ್ಚಲು ಮೀನುಗಳು ಮುಂಗಯ್ಯ ಕಂಡು ನಗುವಂತಾಗಬೇಕೆಂದು ರೈತನು ಮಳೆದೇವರಲ್ಲಿ ಪ್ರಾರ್ಥಿಸುತ್ತಾನೆ. | |
| **VII.** | **ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **2 × 3 = 6** |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 31. | *ಗೊರೂರು ರಾಮಸ್ವಾಮಿ ಅಯ್ಯಂಗಾರ್ :*<br>**ಉತ್ತರ :**<br>ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ೧೯೦೪ ನೇ ಜುಲೈ ೪ ರಂದು ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. ಇವರ ಕೃತಿಗಳು – 'ನಮ್ಮ ಊರಿನ ರಸಿಕರು', 'ಗರುಡಗಂಬದ ದಾಸಯ್ಯ', 'ಹೇಮಾವತಿ', 'ಮೆರವಣಿಗೆ', 'ಅಮೆರಿಕಾದಲ್ಲಿ ಗೊರೂರು', 'ಭೂತಯ್ಯನ ಮಗ ಅಯ್ಯು', 'ಹಳ್ಳಿಯ ಹಾಡು'. | |
| 32. | *ಪುರಂದರದಾಸರು :*<br>**ಉತ್ತರ :**<br>ಪುರಂದರದಾಸರು ಪುರಂದರಗಡದಲ್ಲಿ ಜನಿಸಿದರು. ಇವರು ೧೬ ನೆಯ ಶತಮಾನದಲ್ಲಿ ಜೀವಿಸಿದ್ದರು. ಪುರಂದರದಾಸರು 'ಉದರ ವೈರಾಗ್ಯ' ಎಂಬ ಕೀರ್ತನೆಯನ್ನು, ಸುಳಾದಿ, ಉಗಾಭೋಗಗಳನ್ನು ರಚನೆ ಮಾಡಿದ್ದಾರೆ. | |
| **VIII.** | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| 33. | "ಮಾಡಿದ್ದು ಉಣ್ಣೋ ಮಹಾರಾಯ."<br>**ಅಥವಾ**<br>"ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು." | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| **IX.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 34. | ಗೋವಿಂದಭಟ್ಟರು ಯಾರು ? ಅವರ ಗುಣ ಸ್ವಭಾವಗಳನ್ನು ತಿಳಿಸಿರಿ.<br>**ಅಥವಾ**<br>ಶರೀಫರು ಮತ್ತು ಗೋವಿಂದಭಟ್ಟರ ನಡುವಿನ ಅನ್ಯೋನ್ಯತೆಯನ್ನು ಕುರಿತು ವಿವರಿಸಿ.<br>***ಉತ್ತರ :***<br>ಗೋವಿಂದ ಭಟ್ಟರು ಕಳಸ ಗ್ರಾಮದ ಆದರ್ಶ ಗುರುಗಳು.<br>ಇವರು ಜ್ಞಾನಿಗಳೂ, ವಿದ್ಯಾವಂತರೂ ಎಂದು ಖ್ಯಾತಿವೆತ್ತವರು. ನಗೆಮೊಗದ ಪ್ರಸಾದವಾಣಿಯ ದಿವ್ಯ ವ್ಯಕ್ತಿಗಳಾಗಿದ್ದರು. ಕೈಯಲ್ಲಿ ತಾಮ್ರದ ತಂಬಿಗೆ ಹೆಗಲ ಮೇಲೆ ಪಂಚೆ, ನಡುವಿನಲ್ಲಿ ಲಂಗೋಟಿ – ಇವರ ವೇಷಭೂಷಣಗಳಾಗಿದ್ದವು. ಗುರು ಗೋವಿಂದ ಭಟ್ಟರು ಶಕ್ತಿಯ ಉಪಾಸಕರಾಗಿದ್ದರು. ಉದಾರ ಹೃದಯಿಗಳಾದ ಗೋವಿಂದ ಭಟ್ಟರು ಮಾನವಕುಲ ಒಂದೇ ಎಂಬ ಭಾವನೆಯುಳ್ಳವರಾಗಿದ್ದರು.<br>ಜಾತಿಮತಗಳ ಭೇದವೆಂದರೆ ಇವರಿಗಾಗದು. ಇವರು ಯಾವುದೇ ರೀತಿಯ ಭೇದಭಾವಗಳಿಲ್ಲದೆ ಮುಕ್ತವಾಗಿ ವಿದ್ಯಾದಾನ ಮಾಡುತ್ತಿದ್ದರು. ಇವರು ತುಂಬಾ ಶಾಂತ ಮನಸ್ಸಿನ ಗುರುಗಳಾಗಿದ್ದರು.<br>**ಅಥವಾ**<br>ಗುರು ಗೋವಿಂದ ಭಟ್ಟರು ಸ್ವಜಾತೀಯನಲ್ಲದ ಮುಸಲ್ಮಾನ ಶರೀಫರನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ ಮುಕ್ತ ಹೃದಯದಿಂದ ವಿದ್ಯಾದಾನ ಮಾಡಿದರು. ಗುರುಶಿಷ್ಯರಿಬ್ಬರೂ ಒಂದೇ ತಟ್ಟೆಯಲ್ಲಿ ಊಟ ಮಾಡುತ್ತಿದ್ದರು.<br>"ದೊರಕಿದಾ ಗುರು ದೊರಕಿದಾ ಸದ್ಗುರು" ಎಂದು ಶರೀಫರು ಹಾಡಿರುವುದು ಅವರಿಬ್ಬರ ನಡುವಿನ ಆಪ್ತತೆಯನ್ನು ತಿಳಿಸುತ್ತದೆ. ಗುರು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಶಿಷ್ಯರಿಬ್ಬರೂ ವಿಶೇಷವಾಗಿ ಕೂಡಿಕೊಂಡೇ ಇರುತ್ತಿದ್ದರು. ಗುರುಶಿಷ್ಯರಿಬ್ಬರಿಗೂ ಅಂದಿನ ಸಮಾಜ ಬಹಿಷ್ಕಾರ ಹಾಕಿತ್ತು. ಹಾಳು ಗುಡಿಗುಂಡಾರಗಳೇ ಅವರ ವಸತಿಸ್ಥಾನಗಳಾಗಿದ್ದವು. ಸ್ಫಟಿಕ ಸ್ವಭಾವದವರಾದ ಇವರಿಬ್ಬರು ಸದಾಕಾಲ ದೇವರ ಚಿಂತನೆ ಮತ್ತು ಲೋಕಹಿತದ ಕಾಯಕದಲ್ಲಿ ತೊಡಗಿಕೊಂಡಿದ್ದರು. | |
| **X.** | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | **1 × 4 = 4** |
| 35. | ನಾವು ನೀವು ................................................<br>..............................................................<br>..............................................................<br>..............................................................<br>........................................................ ಇಂದೆ<br><br>**ಅಥವಾ**<br><br>ಕರ್ನಾಟಕ ..................................................<br>..............................................................<br>..............................................................<br>........................................................ ಒಂದೆ.<br><br>***ಉತ್ತರ :***<br>ನಾವು ನೀವು ಅವರು ಇವರು<br>ಒಂದೆ ಒಂದೆ ಒಂದೆ<br>ಭೂಮಿ ತಾಯ ಕುಡಿಗಳೆಂದು<br>ಪಣವ ತೊಡಿರಿ ಇಂದೆ<br><br>**ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕರ್ನಾಟಕ ವಂಗ ಆಂಧ್ರ<br>ಭಾರತೀಯರೊಂದೆ.<br>ಪೂರ್ವೋತ್ತರ ಪಡು ತೆಂಕಣ<br>ಗಾಳಿ ಮುಗಿಲು ಒಂದೆ. | |
| **XI.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)** | **1 × 4 = 4** |
| 36. | 'ಜಲವೇ ಜೀವನ' ಎಂಬ ಮಾತನ್ನು ನಾವೆಲ್ಲ ಕೇಳಿರುತ್ತೇವೆ. ಅದರಲ್ಲೂ ಅಂತರ್ಜಲವು ಮನುಷ್ಯರನ್ನು ಮೊದಲ್ಗೊಂಡು ಎಲ್ಲಾ ಜೀವಿಗಳ ಸಂಜೀವಿನಿ ಆಗಿದೆ. ಭೂಮಿಯ ಒಳಗಡೆ ಇರುವ ನೀರನ್ನು ಅಂತರ್ಜಲವೆಂದು ಕರೆಯುತ್ತಾರೆ.<br><br>ಇತ್ತೀಚಿನ ದಿನಗಳಲ್ಲಿ ಅರಣ್ಯನಾಶ, ಕೊಳವೆಬಾವಿ ಕೊರೆತ, ನಗರಗಳಲ್ಲಿ ಕಾಂಕ್ರಿಟೀಕರಣ ಇವುಗಳಿಂದಾಗಿ ಬಿದ್ದ ಮಳೆ ನೀರು ಭೂಮಿಯೊಳಕ್ಕೆ ಇಂಗುವುದು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಭೂಮಿ ಒಂದು ಜಲಪಾತ್ರೆ ಮಾತ್ರ. ಅದುವೇ ನೀರಿನ ಮೂಲ ಅಲ್ಲ. ಬಿದ್ದ ಮಳೆನೀರು ಈ ಪಾತ್ರೆಯಲ್ಲಿ ತುಂಬಿದರೆ ಮಾತ್ರ ಮುಂದಿನ ಬೇಸಿಗೆಗೂ ತೊಂದರೆ ಇರದು.<br><br>ಅಂತರ್ಜಲ ಹೆಚ್ಚಾಗಬೇಕಾದರೆ ಮಳೆನೀರನ್ನು ತಡೆಯುವ ತಡೆಗಳು ಬೇಕು. ಕಾಡು ಒಂದು ನೈಸರ್ಗಿಕ ಬಹುಹಂತಗಳ ತಡೆ. ಕಾಡೇ ನದಿಗಳ ತಾಯಿ. ನಮ್ಮ ಪೂರ್ವಜರು ಕೆರೆ, ಮದಕ, ಒಡ್ಡುಗಳಂತಹ ತಡೆಗಳನ್ನು ನಿರ್ಮಿಸುತ್ತಿದ್ದರು. ಆದರೆ ನಾವಿಂದು ಅವುಗಳನ್ನು ನಾಶ ಮಾಡಿ ಬಿದ್ದ ಮಳೆನೀರು ಅಮೂಲ್ಯವಾದ ಮೇಲ್ಮಣ್ಣನ್ನು ಕೊಚ್ಚಿಕೊಂಡು ಹೋಗಿ ನಮ್ಮ ಜಲಮೂಲಗಳು ಹೂಳಿನಿಂದ ತುಂಬುವಂತೆ ಮಾಡುತ್ತಿದ್ದೇವೆ. ಹೂಳು ಅಂತರ್ಜಲದ ಮರುಪೂರಣಕ್ಕೆ ಕುಂದು ತರುತ್ತಿದೆ.ಆದ್ದರಿಂದ ಪ್ರತಿವರ್ಷ ಅಂತರ್ಜಲಮಟ್ಟ ಕುಸಿಯುತ್ತಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಎ) ಮಳೆನೀರು ಭೂಮಿಯೊಳಕ್ಕೆ ಇಂಗುವುದು ಕಡಿಮೆಯಾಗುತ್ತಿದೆ ಏಕೆ ? | |
| | ***ಉತ್ತರ :*** ಅರಣ್ಯನಾಶ, ಕೊಳವೆಬಾವಿ ಕೊರೆತ, ನಗರಗಳಲ್ಲಿ ಕಾಂಕ್ರಿಟೀಕರಣ ಇವುಗಳಿಂದಾಗಿ ಬಿದ್ದ ಮಳೆ ನೀರು ಭೂಮಿಯೊಳಕ್ಕೆ ಇಂಗುವುದು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. | |
| | ಬಿ) ಯಾವುದು ಅಂತರ್ಜಲ ಮರುಪೂರಣಕ್ಕೆ ಕುಂದು ತರುತ್ತದೆ ? | |
| | ***ಉತ್ತರ :*** ಹೂಳು ಅಂತರ್ಜಲದ ಮರುಪೂರಣಕ್ಕೆ ಕುಂದು ತರುತ್ತಿದೆ. | |
| | ಸಿ) ಪೂರ್ವಜರು ಮಳೆನೀರು ತಡೆಯಲು ನಿರ್ಮಿಸಿದ ತಡೆಗಳಾವವು ? | |
| | ***ಉತ್ತರ :*** ಕೆರೆ, ಮದಕ, ಒಡ್ಡುಗಳು ನಮ್ಮ ಪೂರ್ವಜರು ಮಳೆನೀರು ತಡೆಯಲು ನಿರ್ಮಿಸಿದ ತಡೆಗಳಾಗಿವೆ. | |
| | ಡಿ) ನದಿಗಳ ತಾಯಿ ಯಾರು ? | |
| | ***ಉತ್ತರ :*** ಕಾಡೇ ನದಿಗಳ ತಾಯಿ. | |
| **XII.** | **ಪ್ರಬಂಧ ಬರವಣಿಗೆ :** | **1 × 4 = 4** |
| 37. | ಸ್ವಚ್ಛಭಾರತ ಅಭಿಯಾನ.<br>**ಅಥವಾ**<br>ಮರಗಳ ಮಹತ್ವ ಮತ್ತು ಸಂರಕ್ಷಣೆ | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **XIII.** | **ಪತ್ರ ಲೇಖನ ಬರೆಯುವುದು :** | **1 × 5 = 5** |
| 38. | ನಿಮ್ಮನ್ನು ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಅಮರ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯ ವಾರ್ಷಿಕೋತ್ಸವಕ್ಕೆ ನಿಮ್ಮ ಅಣ್ಣನನ್ನು ಆಹ್ವಾನಿಸಿ, ಒಂದು ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಹಾವೇರಿಯ ಮುರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿ 'ಆದಿತ್ಯ' ಎಂದು ಭಾವಿಸಿಕೊಂಡು, ನಿಮ್ಮ ಗ್ರಾಮಕ್ಕೆ ಸುಸಜ್ಜಿತ ಗ್ರಂಥಾಲಯ ಮಂಜೂರು ಮಾಡುವಂತೆ ಕೋರಿ, ಮಾನ್ಯ ಜಿಲ್ಲಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ. | |
| | *ವೈಯಕ್ತಿಕ ಪತ್ರ :* | |
| | ಇಂದ, ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ವ್ಯಾವಹಾರಿಕ ಪತ್ರ :* | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |